Sri C. J. MUCKANNAPPA.—Was this survey conducted prior to the railways being handed over by the Government of Mysore or after the railways were taken over by the Centre ?

Sri S. NIJALINGAPPA (Chief Minister).—At no time, has this Railway been considered.

ಶ್ರೀ ಕೆ. ಲಕ್ಕಪ್ಪ.—ತುಮಕೂರಿನಿಂದ ಕೊರಟಗೆರೆ ಮಾರ್ಗವಾಗಿ ಚಿತ್ರದುರ್ಗಕ್ಕೆ ರೈಲು ಬಿಡುವ ಉದ್ದೇಶ ಇದೆಯೇ ಎಂದು ಪ್ರಶ್ನೆ ಕೇಳಿದ್ದಾರೆ. ಆದರೆ ಇದನ್ನು ತುಮಕೂರಿನಿದದ ಹೆಬ್ಬೂರು ಕುಣಿಗಲ್ ಮಾರ್ಗವಾಗಿ ಹಾಸನದವರೆಗೆ ರೈಲ್ವೆ ಹಾಕಬೇಕೆಂಬ ಒಂದು ಯೋಜನೆ ತಯಾರಾಗಿತ್ತು ಮತ್ತು ಅದನ್ನು ಆಮೇಲೆ ಕೈ ಬಿಟ್ಟಿದ್ದಾರೆ. ಈ ಯೋಜನೆ ಪ್ರಕಾರ ರೈಲ್ವೆ ಬಿಡುವುದನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಕಾರ್ಯಗತ ಮಾಡುವ ಪ್ರಶ್ನೆಯೇ ಇಲ್ಲ ಯಾಕೆಂದರೆ ನಾವು ಎಲ್ಲಿಯೂ ರೈಲು ಬಿಡುವುದಿಲ್ಲ. (ನಗು)

ಅಧ್ಯಕ್ಷರು.—ಶ್ರೀ ಎಸ್. ಎ. ರಾಮೇಗೌಡರ ಪರವಾಗಿ ಶ್ರೀ ಬಿ. ಚನ್ನಬ್ಯೈರೇಗೌಡರು ಪ್ರಶ್ನೆ ಹೇಳಬಹುದು.

Government restriction for removal of Sandalwood Trees.

*Q.—140. Sri B. CHANNABYRE GOWDA (Hoskote) [on behalf of SRI S. V. RAME GOWDA (Malur)].—

Will the Government be pleased to state :—

(*a*) whether they are aware that the ryots in whose lands sandal wood trees are grown are put to loss and also experiencing difficulties due to Government restrictions ;

(*b*) if so, whether they would take action to remove such trees and pay compensation to the ryots ?

A.—Sri B. RACHAIAH (Minister for Forests and Fisheries).—

(*a*) No.

(*b*) Does not arise.

ಶ್ರೀ ಬಿ. ಚೆನ್ನಬ್ಯೈರೇಗೌಡ.—ಯಾವ ಖಾನಗೀ ರೈತರುಗಳ ಜಮೀನುಗಳಲ್ಲಿ ಗಂಧದ ಮರಗಳು ಬೆಳದಿವೆಯೋ ಅಂತಹ ರೈತರುಗಳು ಸರಕಾರದ ನಿರ್ಬಂಧಗಳಿಂದಾಗಿ ನಷ್ಟಕ್ಕೊಳಗಾಗಿರುವುದು ಮತ್ತು ತೊಂದರೆಗಳನ್ನು ಅನುಭವಿಸುತ್ತಿರುವುದು ಸರಕಾರದವರಿಗೆ ಗೊತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಗೊತ್ತಿಲ್ಲ ಎಂದು ಉತ್ತರ ಹೇಳಿದ್ದೀರಿ. ಅದು ಹೇಗೆ ಗೊತ್ತಿಲ್ಲ !

†Sri B. RACHAIAH.—In question (a), it has been asked whether ryots are experiencing difficulties, and I have said, no.

ಶ್ರೀ ಬಿ. ಚನ್ನಬ್ಯೈರೇಗೌಡ.—ಖಾನಗಿ ಜಮೀನಿನಲ್ಲಿ ಬೆಳೆದಿರತಕ್ಕಂಥ ಗಂಧದ ಮರಗಳನ್ನು ಸರಕಾರದವರು ತೆಗೆದುಕೊಂಡು ಅವರ ತೊಂದರೆ ನಿವಾರಣೆ ಮಾಡುವುದಕ್ಕೆ ಅವರಿಗೆ ಪರಿಹಾರ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಖಾನಗಿ ರೈತರ ಜಮೀನಿನಲ್ಲಿ ಬೆಳೆದಿರತಕ್ಕಂಥ ಗಂಧದ ಮರಗಳನ್ನು ತೆಗೆದುಕೊಂಡು ಪರಿಹಾರ ಕೊಡುವ ನೀತಿಯನ್ನು ಸರಕಾರ ಅನುಸರಿಸಿಕೊಂಡು ಬಂದಿದೆ. ಆದರೆ ಹೊಸ Act ಜಾರಿಗೆ ಬಂದ ಮೇಲೆ ಹೆಚ್ಚಿನ ರೀತಿಯಲ್ಲಿ ಪರಿಹಾರ ಕೊಡಬೇಕೆಂಬ ಯೋಜನೆ ಇದೆ.

---

†Indicates that the remarks or speeches have not been revised by the member concerned.

ಶ್ರೀ ಪಿ. ವೆಂಕಟಗಿರಿಯಪ್ಪ.—ಅಕ್ಕಿನಲ್ಲಿ ಅವಕಾಶ ಇರುವ ಪ್ರಕಾರ ಗಂಧದ ಮರಗಳನ್ನು ಕಡಿದುಕೊಂಡು ಹೋಗಿದ್ದರೂ ಕೂಡ ಪರಿಹಾರ ರೈತರಿಗೆ ಕೊಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಂಥಾದ್ದನ್ನು ಸರಕಾರದ ಗಮನಕ್ಕೆ ತಂದರೆ ಅವರಿಗೆ ಪರಿಹಾರ ಕೊಡಿಸುತ್ತೀರಾ ?

ಶ್ರೀ ಬಿ. ರಾಚಯ್ಯ.— ಗಮನಕ್ಕೆ ತಂದರೆ ಆ ಸಮಯದಲ್ಲಿ ನೋಡೋಣ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ರೈತರಿಗೆ ಕೂಡಲೇ ಪರಿಹಾರ ಒದಗಿಸಬೇಕು ಎಂದು ನಾವು ಅನೇಕ ಸಲ ಸರಕಾರಕ್ಕೆ ಸಲಹೆ ಮಾಡಿದ್ದೇವೆ. ಇದರ ಬಗ್ಗೆ ಸರಕಾರ ಏನು ಮಾಡಿದೆ ? ಇದುವರೆಗೆ ರೈತರಿಗೆ ಪರಿಹಾರ ಕೊಡದೇ ಇರುವ ಅಧಿಕಾರಿಗಳ ಮೇರೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕಾನೂನು ಪ್ರಕಾರ ಯಾವ ರೀತಿ ಪರಿಹಾರ ಕೊಡಬೇಕೋ ಆ ರೀತಿ ಪರಿಹಾರ ಕೊಡುತ್ತಾ ಬಂದಿದೆ. ಹೊಸ ಆಕ್ಟ್ ಜಾರಿಗೆ ಬಂದ ನಂತರ ಅದರಲ್ಲಿ ಎಷ್ಟು ಪರಿಹಾರ ಬರುತ್ತದೆ ಎಂಬುದನ್ನು ನಮೂದಿಸಿರುತ್ತದೆ. ಅಷ್ಟು ಪರಿಹಾರ ಅವರಿಗೆ ಬರುತ್ತದೆ.

Electrification of Villages in Ron Taluk.

*Q.—210. Sri A. J. DODDAMETI (Ron).—

Will the Government be pleased to state :—

(*a*) when the plans and estimates for electrification of Hullur, Kotabala, Hirehal Villages in Ron Taluk in Dharwar District were sanctioned by the Mysore State Electricity Board ;

(*b*) whether it is a fact that the above work has not yet been undertaken ;

(*c*) if so, when it will be taken up and completed ?

A.—Sri G. B. SHANKAR RAO [Parliamentary Secretary to the Minister for Public Works].—

(*a*) On 17th June 1964.

(*b*) Yes.

(*c*) Arrangements have been made to take up the work on hand and will be completed as expeditiously as possible.

ಶ್ರೀ ಎ. ಜಿ. ದೊಡ್ಡಮೇಟಿ.—ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿರುವ ಈ ಮೂರು ಗ್ರಾಮಗಳ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಮಂಜೂರು ಆಗಿ ಎರಡು ವರ್ಷವಾಯಿತು, ಆದರೂ ಕೂಡ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್.—ಈ ಎಸ್ಟಿಮೇಟು ಬದಲಾವಣೆಯಾದ ಮೂಲಕ ಕೆಲಸ ಪ್ರಾರಂಭ ಮಾಡುವುದು ಸ್ವಲ್ಪ ನಿಧಾನವಾಗಿದೆ.

Sri C. J. MUCKANNAPPA.—I want to know the position of the materials, whether you have got the materials to complete these works.

ಶ್ರೀ ಜಿ. ಬಿ. ಶಂಕರರಾವ್.—ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ಮೆಟೀರಿಯಲ್ ಇದೆ. ಅದಕ್ಕೆ ಬೇಕಾಗುವಷ್ಟು ಮೆಟೀರಿಯಲ್ ಒದಗಿಸುತ್ತೇವೆ.